ಹರಿಸಿದ್ದೂ ಅದಕ್ಕೆ ಕಾರಣವೇನೋ.

## ಮಧ್ಯಂತರದ ನಂತರ

ಜುಲೈ ಅಂತ್ಯಕ್ಕಾಗಲೇ ಎರಡನೇ ಅಲೆಯ ನಿಧಾನಕ್ಕೆ ತನ್ನ ಮುಷ್ಟಿ ಸಡಿಲಿಸತೊಡಗಿತ್ತು. ಜನರು ಮನೆಬಿಟ್ಟು ಹೊರಗೆ ಬರಲಾರಂಭಿಸಿದ್ದರು. ಸರ್ಕಾರವೂ ನಿಯಮಗಳನ್ನು ಸಡಿಲಗೊಳಿಸಿ, ಚಿತ್ರಮಂದಿರಗಳಲ್ಲಿ ಚಿತ್ರಪ್ರದರ್ಶನಕ್ಕೆ ಮತ್ತೆ ಅವಕಾಶ ನೀಡಿತು. ಆದರೆ ಶೇ. 50ರಷ್ಟು ಜನರಿಗೆ ಮಾತ್ರವೇ ಪ್ರವೇಶಕ್ಕೆ ಅನುಮತಿ ನೀಡಿತ್ತು.

ಚಿತ್ರಮಂದಿರಗಳ ಗೇಟು ತೆರೆಯಿತೇನೋ ನಿಜ. ಆದರೆ ಆ ಪರಿಸ್ಥಿತಿಯಲ್ಲಿ ಜನರು ಸಿನಿಮಾ ನೋಡಲು ಚಿತ್ರಮಂದಿರಕ್ಕೆ ಬರುವ ಸಾಧ್ಯತೆ ತುಂಬ ಕಡಿಮೆಯಿತ್ತು. ಹಾಗಾಗಿ ಯಾವ ಸಿನಿಮಾಗಳೂ ಚಿತ್ರಮಂದಿರದ ಕಡೆ ಮುಖ ಹಾಕಲು ಹಿಂಜರಿಯತೊಡಗಿದ್ದವು. ಈ ಹೊತ್ತಿನಲ್ಲಿ ಧೈರ್ಯಮಾಡಿ (ಚಿತ್ರಮಂದಿರಕ್ಕೆ ಬರಲು ಇದಕ್ಕಿಂತ ಒಳ್ಳೆಯ ಅವಕಾಶ ಮುಂದೆ ಸಿಗಲಾರದೇನೋ ಎಂಬ ಆತಂಕವೂ ಇರಬಹುದು) ಚಿತ್ರಮಂದಿರಗಳ ಒಳಗೆ ಅಡಿಯಿಟ್ಟದ್ದು 'ಕಲಿವೀರ' ಎಂಬ ಹೊಸಬರ ಸಿನಿಮಾ. ಅವಿನಾಶ್ ಭೂಷಣ್ ಎಂಬವರು ನಿರ್ದೇಶಿಸಿದ್ದ ಈ ಸಿನಿಮಾ ಎಷ್ಟೇ ವೀರಾವೇಶದಿಂದ ಅಖಾಡಕ್ಕೆ ಬಂದರೂ ಜನರ ಕೃಪಾಕಟಾಕ್ಷ ಅದರ ಮೇಲೆ ಬೀಳಲೇ ಇಲ್ಲ.

## ಟೀವಿಯಲ್ಲಿಯೇ ಮೊದಲು!

ಆಗಸ್ಟ್ ಹದಿನೈದಕ್ಕೆ 'ಸೀತಾರಾಮ್ ಬಿನೊಯ್' ಎಂಬ ಸಿನಿಮಾ ಬಿಡುಗಡೆಯಾಯಿತು. ವಿಜಯ ರಾಘವೇಂದ್ರ ನಾಯಕನಾಗಿ ನಟಿಸಿದ್ದ ಈ ಸಿನಿಮಾ ಹೆಸರಿನಲ್ಲಿ ದಾಖಲೆಯೊಂದು ಬರೆಯಲ್ಪಟ್ಟಿತು. ಒಟಿಟಿ ಮತ್ತು ಚಿತ್ರಮಂದಿರ ಎರಡರ ಸಹವಾಸವನ್ನೂ ಬಿಟ್ಟು ಟೀವಿಯತ್ತ ಈ ಸಿನಿಮಾ ದೃಷ್ಟಿನೆಟ್ಟಿತು. ಸ್ಟಾರ್ ಸುವರ್ಣ ಕನ್ನಡ ವಾಹಿನಿಯಲ್ಲಿ ಸ್ವಾತಂತ್ರ್ಯೋತ್ಸವದ ದಿನ 'ಸೀತಾರಾಮ್ ಬಿನೊಯ್' ಚಿತ್ರ ಬಿಡುಗಡೆಯಾಗಿ, ಚಿತ್ರಮಂದಿರ, ಚಲನಚಿತ್ರೋತ್ಸವಗಳಿಗೂ ಮೊದಲು ಕಿರುತೆರೆಯಲ್ಲಿ ಪ್ರದರ್ಶನಗೊಂಡ ಮೊದಲ ಸಿನಿಮಾ ಎಂಬ ದಾಖಲೆಗೆ ಪಾತ್ರವಾಯಿತು. ಮರುದಿನವೇ, ಅಂದರೆ, ಆ. 16ರಂದೇ ಚಿತ್ರಮಂದಿರಗಳಲ್ಲಿಯೂ ಬಿಡುಗಡೆಯಾಯಿತು. ಆದರೆ ಜನರು ಆ ಚಿತ್ರದಿಂದಲೂ ಆಕರ್ಷಿತರಾಗಲಿಲ್ಲ.



## ಸಂಚಾರ ನಿಲ್ಲಿಸಿದ ವಿಜಯ್

2014ರಲ್ಲಿ ದೇಶದ ಘಟಾನುಘಟಿ ನಟರ ಸಂದಣಿ ನಡುವೆಯೇ ನುಗ್ಗಿ 'ಅತ್ಯುತ್ತಮ ನಟ' ರಾಷ್ಟ್ರಪ್ರಶಸ್ತಿಯನ್ನು ಹಿಡಿದು ನಿಂತಾಗ, ಇಡೀ ದೇಶವೇ ಸಂಚಾರಿ ವಿಜಯ್ ಕಡೆ ಬೆರಗುಗಣ್ಣಿನಿಂದ ನೋಡಿತ್ತು. ಕನ್ನಡ ಚಿತ್ರರಂಗವೂ ಅವರನ್ನು ಅಭಿಮಾನದಿಂದ ಕೊಂಡಾಡಿತ್ತು. ನಂತರದ ದಿನಗಳಲ್ಲಿಯೂ ಅವರಿಗೆ ಸಿಕ್ಕ ಸಾಲು ಸಾಲು ಸಿನಿಮಾಗಳಲ್ಲಿ ಅವರ ಪ್ರತಿಭೆಯನ್ನು ಜ್ವಲಿಸಿದ್ದು ಬೆರಳೆಣಿಕೆಯ ಸಿನಿಮಾಗಳಷ್ಟೇ.

ಸಾಧನೆಯ ಮೆಟ್ಟಿಲುಗಳನ್ನು ಏರುವುದಿನ್ನೂ ಬಾಕಿ ಇತ್ತು. ಸಾಗುವ ದಾರಿಯಿನ್ನೂ ದೂರವಿತ್ತು. ಆದರೆ ಈ ವರ್ಷ ಜುಲೈ 15ರಂದು ತಮ್ಮ ಬದುಕಿನ ಪಯಣವನ್ನು ಅರ್ಧಕ್ಕೇ ನಿಲ್ಲಿಸಿದ ವಿಜಯ್ ಬಾರದ ಲೋಕಕ್ಕೆ ಹೊರಟುಹೋದರು. ಬೈಕ್ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಅವರಿಗಾಗಿ ಇಡೀ ಕರುನಾಡೇ ಮನಸಾರೆ ಪ್ರಾರ್ಥಿಸಿಕೊಂಡಿದ್ದು ಫಲಕೊಡಲಿಲ್ಲ. ಅವರು ಮಡಿದ ಕೆಲವು ತಿಂಗಳುಗಳ ನಂತರ ಬಿಡುಗಡೆಗೊಂಡ 'ಪುಕ್ಸಟ್ಟೆ ಲೈಫು' ಸಿನಿಮಾ ಅವರೊಳಗಿನ ಪ್ರಖರ ನಟನ ಭವಿಷ್ಯದ ಹಲವು ಸಾಧ್ಯತೆಗಳನ್ನು ಕಾಣಿಸುವಂತಿತ್ತು. ಆದರೆ ಆ ಸಾಧ್ಯತೆಗಳನ್ನು ನಿಜವಾಗಿಸಬೇಕಾದ ವಿಜಯ್ ಅವರೇ ಹೊರಟುಹೋಗಿದ್ದರು.

## ಪುನೀತ್: ತಾರೆಯ ಕಣ್ಮರೆ

ಸಿನಿಮಾಗಳಿಂದಷ್ಟೇ ಅಲ್ಲ, ಸಜ್ಜನಿಕೆ, ಸಾರ್ವಜನಿಕ ಜವಾಬ್ದಾರಿಯಿಂದಲೂ ಕನ್ನಡದ ಮನಸ್ಸನ್ನು ಅಖಂಡವಾಗಿ ಆವರಿಸಿಕೊಂಡಿದ್ದವರು ಪುನೀತ್ ರಾಜ್‌ಕುಮಾರ್. ರಾಜ್ ಕುಮಾರ್ ಅವರ ಕಲಾವಂತಿಕೆ ವಿನಯವಂತಿಕೆ, ಪಾರ್ವತಮ್ಮ ಅವರ ವ್ಯವಹಾರ ಚತುರತೆ ಹೃದಯಶ್ರೀಮಂತಿಕೆಗಳನ್ನು ಎರಕ ಹೊಯ್ದುಕೊಂಡೂ ತಮ್ಮದೇ ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಂಡಿದ್ದ ಪುನೀತ್ ಅವರಿಂದ ಕನ್ನಡ ಚಿತ್ರರಂಗಕ್ಕೆ ಆಗಬೇಕಾದದ್ದು ಇನ್ನೂ ಬಹಳಷ್ಟಿತ್ತು. ಆದರೆ ಅಕ್ಟೋಬರ್ 29ರ ಬೆಳಿಗ್ಗೆ ಅನಾರೋಗ್ಯದಿಂದ ಆಸ್ಪತ್ರೆಗೆ ಹೋದ ಅವರು ಜೀವಂತವಾಗಿ ಮರಳಿ ಬರಲಿಲ್ಲ. ಅವರ ಸಾವಿಗೆ ಕರುನಾಡಷ್ಟೇ ಅಲ್ಲದೆ ಇಡೀ ದೇಶ, ಬೇರೆ ಬೇರೆ ಚಿತ್ರರಂಗದ ಗಣ್ಯಮಾನ್ಯರು ಮಿಡಿದ ರೀತಿ ಅವರ ಬದುಕಿನ ಸಾರ್ಥಕತೆಯನ್ನು ಸಾರುವಂತಿತ್ತು. ಅವರ ಸಮಾಧಿಯ ಜಾಗಕ್ಕೆ ಅಭಿಮಾನಿಗಳು ಸರತಿಸಾಲಿನಲ್ಲಿ ನಿಂತು ದರ್ಶನ ಪಡೆದುಕೊಂಡು ಹೋಗುತ್ತಿರುವುದನ್ನು ನೋಡಿದರೆ, ಬಹುಶಃ ರಾಜ್‌ಕುಮಾರ್ ನಂತರ ಇಷ್ಟು ವ್ಯಾಪಕವಾಗಿ ಜನರ ಹೃದಯವನ್ನು ಮಿಡಿದ ಸಾವು ಪುನೀತ್ ಅವರದೆನ್ನಿಸುತ್ತದೆ.

ಪುನೀತ್ ಅವರೇ ಪ್ರಾರಂಭಿಸಿದ ಪಿಆರ್‌ಕೆ ಪ್ರೊಡಕ್ಷನ್ ಹೊಸಬರ ಸಾಲು ಸಾಲು ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿತ್ತು. ಪಿಆರ್‌ಕೆ ಆಡಿಯೊದಲ್ಲಿ ತಮ್ಮ ಸಿನಿಮಾ ಹಾಡುಗಳನ್ನು ಬಿಡುಗಡೆ ಮಾಡಿ ಪ್ರಚಾರ ಪಡೆದುಕೊಂಡ ಯುವ ಸಿನಿಕರ್ತರ ಸಂಖ್ಯೆಯೂ ದೊಡ್ಡದಿದೆ.

ಪುನೀತ್ ಕನಸಿನ ದಾರಿಯನ್ನು ಅವರಿಲ್ಲದೆಯೂ ಮುಂದುವರಿಸಿಕೊಂಡು ಹೋಗುವುದಾಗಿ ಅವರ ಪತ್ನಿ ಅಶ್ವಿನಿ ಹೇಳಿದ್ದಾರೆ. ಹಾಗೆಯೇ ಪಿಆರ್‌ಕೆ ಪ್ರೊಡಕ್ಷನ್ಸ್‌ನಲ್ಲಿ ಮತ್ತೆ ಚಟುವಟಿಕೆಗಳು ಆರಂಭವಾಗಿವೆ. ಪುನೀತ್ ಅವರೇ ತುಂಬ ಆಸ್ಥೆಯಿಂದ ನಿರ್ಮಿಸಿ, ಭಾಗವಹಿಸಿದ 'ಗಂಧದ ಗುಡಿ' ಎಂಬ ಡಾಕ್ಯೂಫಿಲಂ ಬಿಡುಗಡೆಯ ಸೂಚನೆಗಳು ದೊರಕುತ್ತಿವೆ. ಪಿಆರ್‌ಕೆ ಸಂಸ್ಥೆ ಹೊಸಬರ, ಪ್ರಯೋಗಶೀಲರ ಬೆಂಬಲದ ಬೆನ್ನೆಲುಬಾಗಬೇಕು ಎಂಬ ಪುನೀತ್ ಕನಸು ಅವರಿಲ್ಲದೆಯೂ ನನಸಾಗುವ ಲಕ್ಷಣಗಳು ಕಾಣಿಸುತ್ತಿವೆ. ಪುನೀತ್ ಅವರಿಗೆ ಇದಕ್ಕಿಂತ ದೊಡ್ಡ ಶ್ರದ್ಧಾಂಜಲಿ ಇನ್ನೇನಿದ್ದೀತು?



'ಯುವರತ್ನ'ನಾಗಿ ಪುನೀತ್